# ರಂಗಮ್ಮ

## 'ಅರ್ಧಾಂಗಿ'

ಮೂಲ : **'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ**
ಅನುವಾದ : **ಸ್ವರ್ಣಗೌರಿ**

**ಸ್ವಾ**ಮಿ ವಿವೇಕಾನಂದರನ್ನು ಪಾಶ್ಚಾತ್ಯ ದೇಶಕ್ಕೆ ಕಳುಹಿಸುವಲ್ಲಿ ಅಳಸಿಂಗ ಪೆರುಮಾಳರ ಪಾತ್ರ ಅದೆಷ್ಟು ಹಿರಿದಾದುದು ಎಂಬುದು ಸ್ವಾಮೀಜಿಯ ಭಕ್ತರಿಗೆಲ್ಲಾ ತಿಳಿದ ವಿಷಯವೇ. ಅಳಸಿಂಗನ ಧರ್ಮಪತ್ನಿ ರಂಗಮ್ಮಳ ಮನಃಪೂರ್ವಕ ಸಹಕಾರವಿಲ್ಲದಿದ್ದರೆ ಆತನು ಈ ಕಾರ್ಯದಲ್ಲಿ ಯಶಸ್ವಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಅಳಸಿಂಗನಾದರೋ ಆಗರ್ಭ ಶ್ರೀಮಂತನೇನೂ ಅಲ್ಲ. ಆದರೆ ಶುದ್ಧ, ಸರಳ, ಭಕ್ತಿಮತಿಯಾದ ಪತಿವ್ರತೆ ರಂಗಮ್ಮ ಬಹಳ ದಕ್ಷತೆಯಿಂದ ಕುಟುಂಬದ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಳು.



ಪಾಶ್ಚಾತ್ಯ ದೇಶದಲ್ಲಿ ಕೈಯಲ್ಲಿ ಕಾಸಿಲ್ಲದೆ ಹಸಿವು, ಚಳಿಗಳಿಂದ ಬಾಧೆಪಡುತ್ತಿದ್ದ ಸಮಯದಲ್ಲಿ ಸ್ವಾಮೀಜಿ ಅಳಸಿಂಗನಿಗೆ ಹೀಗೆ ಪತ್ರ ಬರೆದರು: ''ಈ ಪತ್ರ ನಿನಗೆ ತಲುಪುವ ಮುನ್ನವೇ ನನ್ನ ಬಳಿ ಇರುವ ಹಣ ೭೦ ಅಥವಾ ೬೦ ಡಾಲರ್‌ಗಳಿಗೆ ಇಳಿದಿರುತ್ತದೆ. ಆದ್ದರಿಂದ ತಕ್ಷಣವೇ ಹೇಗಾದರೂ ಮಾಡಿ ಹಣ ಕಳುಹಿಸು. ಜನಗಳ ಮೇಲೆ ಪ್ರಭಾವ ಬೀರಲು ನಾನು ಇನ್ನು ಕೆಲವು ಕಾಲ ಇಲ್ಲಿರಬೇಕಾಗುತ್ತದೆ ... ನನ್ನನ್ನು ಇಲ್ಲಿಡಲು ನಿನಗೆ ಕಷ್ಟವಾದರೆ ಈ ದೇಶದಿಂದ ಹೊರ ಬರಲು ನನಗೆ ಸ್ವಲ್ಪ ಹಣವನ್ನು ಕಳುಹಿಸು. ಅಷ್ಟರೊಳಗೆ ಏನಾ ದರೂ ಅದೃಷ್ಟ ಖುಲಾಯಿಸಿದರೆ ನಿನಗೆ ಬರೆಯುವೆ ಅಥವಾ ಟೆಲಿಗ್ರಾಂ ಕಳುಹಿಸುವೆ.'' ಕಡಲ ತಂತಿವಾರ್ತೆಯಲ್ಲಿ ಒಂದು ಅಕ್ಷರಕ್ಕೆ ನಾಲ್ಕುರುಪಾಯಿ! ತಂತಿವಾರ್ತೆ ಓದಿದ ಅಳಸಿಂಗನಿಗೆ ದುಃಖ ಉಮ್ಮಳಿಸಿ ಅತ್ತುಬಿಟ್ಟನು. ತಕ್ಷಣವೇ ಸ್ವಾಮೀಜಿಯವರ ಹಿತೈಷಿಗಳಿಂದ ಸಾಲ ಕೇಳಲು ಮತ್ತು ಹಣ ಸಂಗ್ರಹಿಸಲು ಮುಂದಾದನು. ವಾರ್ತೆ ಕೇಳಿದ ರಂಗಮ್ಮ ಹಿಂದುಮುಂದು ಆಲೋಚಿಸದೆ ತನ್ನಲ್ಲಿದ್ದ ಚಿನ್ನಾಭರಣಗಳನ್ನು ಆನಂದದಿಂದ ಮಾರಾಟ ಮಾಡಿ ಹಣ ನೀಡಿದಳು. ಅಷ್ಟೇ ಅಲ್ಲದೆ, ಪತಿಯ ಕಡಿಮೆ ಸಂಬಳದಲ್ಲಿ ಅತಿ ಜಾಗರೂಕತೆಯಿಂದ ಸಂಸಾರ ನಿರ್ವಹಿಸಿದಳು.

ಕೆಲವು ತಿಂಗಳ ನಂತರ, ಪಾಶ್ಚಾತ್ಯ ದೇಶದಲ್ಲಿ ಅಪೂರ್ವ ಯಶಸ್ಸನ್ನು ಪಡೆದ ತಮ್ಮ ಗುರುಗಳಿಂದ ಬಂದ ಪತ್ರವನ್ನು ಓದಿ ಈ ಭಕ್ತಶ್ರೇಷ್ಠ ದಂಪತಿಗಳ ಆನಂದಕ್ಕೆ ಪಾರವೇ ಇರಲಿಲ್ಲ:

ಚಿಕಾಗೋ
೨ನೇ ನವೆಂಬರ್, ೧೮೯೩

ಪ್ರಿಯ ಆಳಸಿಂಗ,

ಕ್ಷಣಕಾಲದ ನನ್ನ ದೌರ್ಬಲ್ಯದಿಂದ ನಿನಗೆ ಅಷ್ಟು ತೊಂದರೆ ಯಾದುದಕ್ಕಾಗಿ ನಾನು ವಿಷಾದಿಸುತ್ತೇನೆ, ಆ ಸಮಯದಲ್ಲಿ ನನ್ನ ಜೇಬಿನಲ್ಲಿ ಕಾಸಿರಲಿಲ್ಲ. ಅನಂತರ ದೇವರು ನನಗೆ ಸ್ನೇಹಿತರನ್ನು ಕಳುಹಿಸುತ್ತಿರುವನು...

ಮಹಾಸಭೆಯ ಪ್ರಾರಂಭದ ದಿನ ಬೆಳಿಗ್ಗೆ ... ಅವರೆಲ್ಲರೂ ಆಗಲೇ ಅಣಿಮಾಡಿದ ಭಾಷಣದೊಂದಿಗೆ ಬಂದಿದ್ದರು. ನಾನು ಮೂರ್ಖ, ನನ್ನ ಹತ್ತಿರ ಏನೂ ಇರಲಿಲ್ಲ. ಸರಸ್ವತಿಗೆ ನಮಿಸಿ ಮುಂದೆ ಬಂದೆ. ಡಾಕ್ಟರ್ ಬರೋಸರು ಸಭೆಗೆ ನನ್ನನ್ನು ಪರಿಚಯ ಮಾಡಿಕೊಟ್ಟರು. ನಾನು ಸಣ್ಣ ಭಾಷಣವನ್ನು ಮಾಡಿದೆ. ''ಅಮೆರಿಕಾದ ಸಹೋದರಿಯರೇ, ಮತ್ತು ಸಹೋದರರೆ'' ಎಂದು ನಾನು ಸಂಬೋಧಿಸಿದೆ. ಕಿವಿ ಕಿವುಡಾಗುವಂತೆ ಎರಡು ನಿಮಿಷಗಳು ಕರತಾಡನವಾಯಿತು. ಇದು ನಿಂತ ಮೇಲೆ ನನ್ನ ಭಾಷಣ ಮೊದಲಾಯಿತು. ಅದು ಮುಗಿದ ಮೇಲೆ ಉದ್ವೇಗದಿಂದ ಸುಸ್ತಾಗಿ ಕುಳಿತುಬಿಟ್ಟೆ. ಮಾರನೆಯ ದಿನ ಎಲ್ಲ ವೃತ್ತಪತ್ರಿಕೆಗಳೂ ನನ್ನ ಭಾಷಣವೇ ಎಲ್ಲಕ್ಕಿಂತಲೂ ಉತ್ತಮವಾದುದೆಂದು ಕೊಂಡಾಡಿದವು... ಅಂದಿನಿಂದ ನಾನು ಪ್ರಖ್ಯಾತನಾದೆನು. ಹಿಂದೂ ಧರ್ಮದ ಮೇಲೆ ಲೇಖನವನ್ನು ಓದಿದ ದಿನ ಹಿಂದೆಂದೂ ಇಲ್ಲದಷ್ಟು ಜನರು ನೆರೆದಿದ್ದರು... ವರ್ತಮಾನ ಪತ್ರಿಕೆಗಳು ನನ್ನ ವಿಷಯವಾಗಿ ಬರೆದಿರುವುದನ್ನು ನಿನಗೆ ಕತ್ತರಿಸಿ ಕಳುಹಿಸಿದರೆ, ನೀನು ಅದನ್ನು ನೋಡಿದಾಗ ಆಶ್ಚರ್ಯಪಡಬಹುದು. ಆದರೆ ನಾನು ಕೀರ್ತಿದ್ವೇಷಿ ಎಂಬುದು ನಿನಗೆ ಆಗಲೇ ಗೊತ್ತಿದೆ. ಇಷ್ಟು ಹೇಳಿದರೆ ಸಾಕು: ನಾನು ಯಾವಾಗ ವೇದಿಕೆಯ ಮೇಲೆ ಮಾತನಾಡುವುದಕ್ಕೆ ಹೋದರೂ ನನಗೋಸುಗ ಕಿವಿ ಕಿವುಡಾಗುವಂತೆ ಒಂದು ದೊಡ್ಡ ಕರತಾಡನವಾಗುತ್ತಿತ್ತು...

...ಅತಿ ಮತಾಂಧ ಪತ್ರಿಕೆಗಳೂ ಕೂಡ ಇಷ್ಟನ್ನಾದರೂ ಒಪ್ಪಲೇ ಬೇಕಾಯಿತು: ''ಸುಂದರ ಮುಖ, ಚಿತ್ತಾಕರ್ಷಕ ವರ್ಚಸ್ಸು, ಅಮೋಘವಾದ ವಾಕ್‌ಚಾತುರ್ಯವುಳ್ಳ ಈ ವ್ಯಕ್ತಿ ಮಹಾಸಭೆ ಯಲ್ಲಿ ಅಗ್ರಗಣ್ಯ.''

...ಬಡವರೆಂದು ನೀವು ಯೋಚಿಸಬೇಡಿ. ಹಣವಲ್ಲ ಶಕ್ತಿ. ಒಳ್ಳೆಯತನ, ಪಾವಿತ್ರ್ಯ ಇವು ಶಕ್ತಿ. ಜಗದ ಎಲ್ಲ ಕಡೆಯಲ್ಲೂ ಇರುವುದು ಹೀಗೆ ಎಂಬುದನ್ನು ಬಂದು ನೋಡಿ.

ನಿಮ್ಮ

ವಿವೇಕಾನಂದ

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೪, ಪು. ೯೩)*

# ಸ್ಯಾಂಗ್‌ಪ್ಲೊ ಲಿಂಡೋ

## ಕಾಸಿಯಾ ಪಂಗಡದ ಸ್ವರ್ಣಮಣಿ



**ಗೌ**ಹಾತಿಯಿಂದ ಶಿಲ್ಲಾಂಗ್‌ಗೆ ಹೋಗುವ ಹಾದಿಯಲ್ಲಿ ನಾಂಗ್‌ಪೋ ಎಂಬ ಸ್ಥಳದಲ್ಲಿ ಜನಿಸಿದ್ದಳು ಸ್ಯಾಂಗ್‌ಪೊ ಲಿಂಡೋ. ನಾಂಗ್‌ಪೋ ಜನರು ಕಾಸಿಯಾ ಪಂಗಡಕ್ಕೆ ಸೇರಿದವರು. ಲಿಂಡೋ ತಂದೆ ಸಿಲೋವಾನ್ ಇಲ್ಲಿ ಒಂದು ಅತಿಥಿಗೃಹ ಪ್ರಾರಂಭಿಸಿದ್ದರು. ಸ್ಥಳೀಯ ಮಿಷನರಿ ಶಾಲೆಯಲ್ಲಿ ಸ್ವಲ್ಪಕಾಲ ಓದಿದ್ದ ಲಿಂಡೋ ಇಂಗ್ಲಿಷ್‌ನಲ್ಲಿ ಓದಲು, ಬರೆಯಲು ಕಲಿತಿದ್ದಳು. ದುರದೃಷ್ಟವಶಾತ್, ತಂದೆಯ ಅಕಾಲ ಮರಣ ದಿಂದಾಗಿ ಮುಂದೆ ಓದಲಾಗಲಿಲ್ಲ. ಬದಲಾಗಿ ತಂದೆ ನಡೆಸುತ್ತಿದ್ದ ಅತಿಥಿ ಗೃಹದ ಜವಾಬ್ದಾರಿ ಇವಳ ಹೆಗಲ ಮೇಲೆ ಬಿತ್ತು.

ಲಿಂಡೋ ತನ್ನ ೨೨ ಅಥವಾ ೨೩ ವಯಸ್ಸಿನಲ್ಲಿ ಸ್ವಾಮಿ ವಿವೇಕಾನಂದರನ್ನು ಪ್ರಥಮ ಬಾರಿ ಭೇಟಿಯಾದಳು. ಆ ಸಮಯದಲ್ಲಿ ಸ್ವಾಮೀಜಿ ಉಸಿರಾಟದ ತೊಂದರೆಯಿಂದ ನರಳುತ್ತಿದ್ದರು. ಲಿಂಡೋ ಕುಟುಂಬದವರು ಕೂಡಲೇ ವೈದ್ಯರನ್ನು ಕರೆಸಿ ಉಪಚರಿಸಿದ ನಂತರ ಸ್ವಾಮೀಜಿ ಗುಣಮುಖರಾದರು. ಲಿಂಡೋಳ ಪತಿ ಮುರಿಯನ್ ಬಳಿ ಸ್ವಾಮೀಜಿ ಗಂಟೆಗಟ್ಟಲೆ ಕಾಸಿಯಾ ಪಂಗಡದವರ ಸಮಸ್ಯೆಗಳು, ಕಾರ್ಯಾಚರಣೆ, ಮೂಢನಂಬಿಕೆಗಳು ಹಾಗೂ ಅವರ ಬೇಡಿಕೆಗಳ ಬಗ್ಗೆ ಚರ್ಚಿಸಿದರು. ಕಾಸಿಯಾ ಪಂಗಡದವ ರನ್ನೆಲ್ಲಾ ಒಗ್ಗೂಡಿಸಿ ಕಮಿಷನರ್‌ರನ್ನು ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಕುರಿತು ಒಂದು ಲಿಖಿತ ವರದಿ ಒಪ್ಪಿಸಲು ಸಲಹೆ ನೀಡಿದರು. ಅಲ್ಲದೆ ಕಮಿಷನರ್ ದಯಾರ್ದ್ರ ಹೃದಯವುಳ್ಳವರೆಂದು ಮತ್ತು ಖಂಡಿತ ಸಹಾಯ ಮಾಡುವರೆಂದು ಸಹ ತಿಳಿಸಿದರು.

ಸ್ಯಾಂಗ್‌ಪೊ ವಂಶಾವಳಿಯಲ್ಲಿ ಸ್ವಾಮೀಜಿಯವರ ಹೆಸರು ಈಗಲೂ ಜೀವಂತವಾಗಿದೆ. ಆ ಸಂತತಿಯವರು ಹೀಗೆಂದು ಉದ್ಗರಿಸಿದ್ದಾರೆ: 'ಸ್ವಾಮೀಜಿ ನಮ್ಮನ್ನು ಅಗಲಿದ್ದಾರೆ. ಆದರೆ ಅವರೊಬ್ಬ ಮಹಾಪುರುಷರು ಮತ್ತು ಅವರ ಕೃಪೆ ನಮ್ಮೆಲ್ಲರನ್ನು ಸದಾ ಕಾಪಾಡುತ್ತಿದೆ ಎಂದು ದೃಢವಾಗಿ ನಂಬುತ್ತೇವೆ.'' ಸ್ಯಾಂಗ್‌ಪೊ ಹಾಗೂ ಮುರಿಯನ್ ದಂಪತಿಗಳಿಬ್ಬರೂ ಕ್ರೈಸ್ತರಾದರೂ ಸ್ವಾಮೀಜಿಯವರನ್ನು ಆರಾಧಿಸಿದರು. ಸ್ವಾಮೀಜಿಯರ ಭಾವಚಿತ್ರವನ್ನು ಕ್ರಿಸ್ತನ ಭಾವಚಿತ್ರದ ಬಳಿ ಇಟ್ಟು ದಿನಾ ಪೂಜಿಸುತ್ತಿದ್ದರು. ಭಾರತ ದೇಶ ಸ್ವತಂತ್ರವಾಗುವ ಮುನ್ನವೇ ಸ್ಯಾಂಗ್‌ಪೊ ಇಹಲೋಕ ತ್ಯಜಿಸಿದಳು. ಸ್ವಾಮೀಜಿಯರ ಪ್ರಭಾವ ದಿಂದಲೇ ಈ ದಂಪತಿಗಳ ಮಗಳು ದೀನಾ ಗಾಂಧೀಜಿಯವರ ಕರೆಗೆ ಮಾರ್ದನಿಸುತ್ತಾ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಳು. ಸಮಾಜ ಸುಧಾರಕ, ಅಸ್ಸಾಮಿನ ಕವಿ ಸೈಕಿಯಾನಿಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಳು. ಮಹಿಳೆಯರ ಶೋಷಣೆ, ಪಕ್ಷಪಾತಗಳ ವಿರುದ್ಧ ಹೋರಾಡಿದಳು. ಸ್ತ್ರೀಯರ ಏಳಿಗೆಗಾಗಿ ದುಡಿಯುತ್ತಿದ್ದ ಖಾಸಗಿ ಸಂಸ್ಥೆ, 'All Assam Pradeshik Mahila Samiti'ಯ ಸದಸ್ಯೆಯಾಗಿದ್ದಳು.



❖ ಸಾಧು ಎಲ್ಲ ಮಾಯೆಗಳನ್ನೂ ಕತ್ತರಿಸಬೇಕು. ಬಂಗಾರದ ಸಂಕೋಲೆಯೂ ಬಂಧನವೇ, ಕಬ್ಬಿಣದ ಸಂಕೋಲೆಯೂ ಬಂಧನವೇ. ಸಾಧುಗಳು ಯಾವುದೇ ರೀತಿಯ ಮಾಯೆಯಲ್ಲಿ ಸಿಲುಕಿಕೊಳ್ಳಬಾರದು.

❖ ಶಿಷ್ಯ : ವೇದಾಂತವಾದಿಗಳಾದ ಸಾಧುಗಳೆಲ್ಲ ನಿರ್ವಾಣ ಹೊಂದುವರೆ?

ಶ್ರೀಮಾತೆ: ಹೌದು, ಹೊಂದುವರು. ಮಾಯೆಯನ್ನು ಕತ್ತರಿಸುತ್ತ ನಿರ್ವಾಣವುಂಟಾಗುವುದು. ಅಂದರೆ ಅವರು ಭಗವಂತನಲ್ಲಿ ಒಂದಾಗುವರು. ಆಸೆಗಳ ಪರಿಣಾಮವೇ ಈ ದೇಹ. ಆಸೆ ಸ್ವಲ್ಪವೂ ಇರದಿದ್ದರೆ ದೇಹ ಉಳಿಯದು. ಒಂದೇ ಸಲ ಆಸೆಯೆಲ್ಲ ಇಲ್ಲವಾದರೆ ಎಲ್ಲವೂ ಮುಗಿದಂತೆ.

ಶ್ರೀಶಾರದಾದೇವಿ ವಚನವೇದದಿಂದ *(ಪು.೧೭೮)*